ಹಣತೆ ಮೊದಲಾದ ವಿಕಾರಗಳೆಲ್ಲವೂ ಬರಿಯ ಹೆಸರು ಮಾತ್ರ, ಮಣ್ಣು ಮಾತ್ರ ಸತ್ಯ ಎಂದು ಅದರ ಅರ್ಥ. ಇದು ಉದಾಹರಣೆಗೆ ಮಾತ್ರ. ಹಗ್ಗ ಮಣ್ಣು ಮೊದಲಾದವೂ ಸಹ ಪರಮಾರ್ಥ ಮಟ್ಟದಲ್ಲಿ ಅಸತ್ಯವೇ ಸರಿ. ಬ್ರಹ್ಮವೇ ಹಗ್ಗ ಮೊದಲಾದ ರೂಪದಿಂದ ಕಾಣಿಸಿಕೊಂಡಿದೆ. ಹಗ್ಗ, ಮಣ್ಣು – ಇವೆಲ್ಲವೂ ಅವಿದ್ಯೆ ತೋರತಕ್ಕವು. ಮೂಲವಸ್ತುವಾದ ಬ್ರಹ್ಮವು ಯಾವ ವಿಕಾರವನ್ನೂ ಹೊಂದದೇ ಇರುತ್ತದೆ. ಆದ್ದರಿಂದ ಬ್ರಹ್ಮವೇ ಸತ್ಯ.

ಒಳ್ಳೆಯದು, ಬ್ರಹ್ಮವು ಮಣ್ಣಿನಂತೆ ಮೂಲದ್ರವ್ಯವಾದರೆ ಅದೊಂದು ಜಡವಸ್ತುವಾಗಿರಬಹುದು. ಅದು ಜಗತ್ತಿಗೆ ಕಾರಣವಾಗುವುದಾದರೂ ಹೇಗೆ ಎಂಬ ಪ್ರಶ್ನೆ ಹುಟ್ಟುತ್ತದೆ. ಆದ್ದರಿಂದ ಶ್ರುತಿಯು **'ಜ್ಞಾನಂ'** ಎಂಬ ಇನ್ನೊಂದು ವಿಶೇಷಣ ವನ್ನು ಸೇರಿಸಿದೆ. ಇಲ್ಲಿ ಜ್ಞಾನವೆಂದರೆ ತಾರ್ಕಿಕವಾದ ಘಟ ಜ್ಞಾನ ಪಟಜ್ಞಾನ ಮುಂತಾದ ಜ್ಞಾನವಲ್ಲ. ಜ್ಞಾನ ಶಬ್ದಕ್ಕಿಲ್ಲಿ 'ಚೈತನ್ಯ'ವೆಂದರ್ಥ. ಚೈತನ್ಯವೆಂದರೆ ಒಂದಾನೊಂದು ಶಕ್ತಿ ವಿಶೇಷವೆನ್ನಬಹುದು. ಜ್ಞಾನಸ್ವರೂಪವಾದ ಒಂದು ನಿತ್ಯ ಚೈತನ್ಯ ವನ್ನೇ ಇಲ್ಲಿ ಜ್ಞಾನವೆಂದು ತಿಳಿಯಬೇಕು.

ಲೌಕಿಕವಾದ ಘಟಾದಿ ಜ್ಞಾನಕ್ಕೂ ನಿತ್ಯ ಚೈತನ್ಯರೂಪವಾದ ಜ್ಞಾನಕ್ಕೂ ವ್ಯತ್ಯಾಸವಿದೆ. ಘಟಾದಿ ಜ್ಞಾನಕ್ಕೆ ಅಂತವುಂಟು, ನಿತ್ಯ ಚೈತನ್ಯರೂಪವಾದ ಜ್ಞಾನಕ್ಕೆ ಅಂತವಿಲ್ಲವೆಂಬುದನ್ನು ತಿಳಿಸುವುದಕ್ಕಾಗಿ **'ಅನಂತಂ'** ಎಂಬ ಇನ್ನೊಂದು ವಿಶೇಷಣ ಬಂದಿದೆ. ಆದ್ದರಿಂದಲೇ ಬ್ರಹ್ಮಸ್ವರೂಪವಾದ ಜ್ಞಾನವು ಘಟಜ್ಞಾನ ದಂತೆ ಲೌಕಿಕಜ್ಞಾನವಲ್ಲವೆಂದು ತಿಳಿಯಬೇಕು.

ಅನಂತವೆಂದರೆ ಅಂತವಿಲ್ಲದ್ದು, ಕೊನೆಯಿಲ್ಲದ್ದು ಎಂದು ಅರ್ಥ. ಅಂತವು ದೇಶ ಕಾಲ ವಸ್ತುಗಳಿಂದ ಸಂಭವಿಸುತ್ತದೆ. ಬ್ರಹ್ಮವು ದೇಶ – ಕಾಲ – ವಸ್ತುಗಳಿಂದ ಪರಿಚ್ಛೇದರಹಿತ ಎಂದು ತಾತ್ಪರ್ಯ. ಹೇಗೆಂದರೆ ಕರ್ನಾಟಕ ರಾಜ್ಯಕ್ಕೆ ದಕ್ಷಿಣ ದಿಕ್ಕಿನಲ್ಲಿ ತಮಿಳುನಾಡು ಇದೆ. ತಮಿಳುನಾಡಿನವರೆಗೆ ಮಾತ್ರ ಕರ್ನಾಟಕವೆನಿಸುವುದರಿಂದ ಇದು ತಮಿಳುನಾಡು ಎಂಬ ರಾಜ್ಯದಿಂದ ಪರಿಚ್ಛೇದಗೊಂಡಿದೆ. ಹೀಗೆಯೇ ಲೋಕದಲ್ಲಿ ಸಕಲ ವಸ್ತುಗಳಿಗೂ ವ್ಯಾಪ್ತಿಯು ಪರಿಮಿತವಾದ್ದರಿಂದ, ದೇಶತಃ ಇವು ಪರಿಚ್ಛೇದಸಹಿತವಾದವು. ಬ್ರಹ್ಮವಾದರೋ ಸರ್ವವ್ಯಾಪಿಯಾದ 'ವಿಭು.' ಇದಕ್ಕೆ ನಾಲ್ಕು ದಿಕ್ಕುಗಳಲ್ಲಿ ಹಾಗೂ ಮೇಲೆ ಕೆಳಗೆ ವಿಭಾಗಿಸತಕ್ಕ ಯಾವ ದೇಶವೂ (ಸ್ಥಳ) ಇಲ್ಲ. ಹಾಗೆಯೇ ಇತರ ವಸ್ತುಗಳಿಗೆ ಕಾಲದ ಗಡಿ ಉಂಟು. ಅವೆಲ್ಲವೂ ಹುಟ್ಟಿ ನಾಶವಾಗುವುದರಿಂದ ಅವುಗಳಿಗೆ ಆದಿಕಾಲ, ಅಂತ್ಯಕಾಲಗಳುಂಟು. ಕಾಲದಿಂದ ಅವು ಪರಿಚ್ಛೇದಗೊಂಡಿವೆ. ಬ್ರಹ್ಮವು ಅನಾದಿಯೂ ಶಾಶ್ವತವೂ ಆದ್ದರಿಂದ ಇದಕ್ಕೆ ದೇಶ ಕಾಲಗಳ ಗಡಿ ಇಲ್ಲ. ತಾರ್ಕಿಕ ವಸ್ತುಗಳಿಗೆ ಪ್ರತಿಯಾಗಿ ಇನ್ನೊಂದು ವಸ್ತುವಿರುವುದರಿಂದ, ಅವು ಅನ್ಯ ವಸ್ತುಗಳಿಂದ ಪರಿಚ್ಛೇದಗೊಳ್ಳುತ್ತವೆ. ಈ ರೀತಿ ಬ್ರಹ್ಮವು ಯಾವುದರಿಂದಲೂ ಪರಿಚ್ಛೇದಗೊಳ್ಳದೇ ಅನಂತವಾಗಿರುತ್ತದೆ. ಏಕೆಂದರೆ ಬ್ರಹ್ಮಕ್ಕಿಂತ ಬೇರೆಯಾದ ಇನ್ನೊಂದು ವಸ್ತುವೇ ಇಲ್ಲ. ನಮಗೆ ಕಾಣುವ ಸಕಲ ವಸ್ತುಗಳೂ ಮೂಲತಃ ಬ್ರಹ್ಮವೇ ಆಗಿದ್ದು ಕೇವಲ ಭ್ರಮೆಯಿಂದ ಘಟ ಪಟಾದಿ ವಸ್ತುಗಳಂತೆ ತೋರುತ್ತವೆ. ಆದ್ದರಿಂದಲೇ **'ಸರ್ವಂ ಖಲ್ವಿದಂ ಬ್ರಹ್ಮ', 'ಆತ್ಮೈವೇದಂ ಸರ್ವಂ', 'ನೇಹ ನಾನಾಸ್ತಿ ಕಿಂಚನ'** ಎಂದು ಶ್ರುತಿಯು ಹೇಳಿದೆ. ಜೀವವು ಬ್ರಹ್ಮವೇ ಎಂಬುದು ಅದ್ವೈತ ಸಿದ್ಧಾಂತವಾಗಿದೆ. ಹಾಗೆಯೇ, **'ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ'** ಎಂಬುದು ಬ್ರಹ್ಮದ ಸ್ವರೂಪಲಕ್ಷಣವೆಂದು ತಿಳಿಯಬೇಕು.

ಈ ಪ್ರಕಾರವಾಗಿ ಬ್ರಹ್ಮವನ್ನು ತಿಳಿದವನು ಬ್ರಹ್ಮದಲ್ಲಿಯೇ ಸೇರಿಹೋಗುತ್ತಾನೆ. ಆತನಿಗೆ ಪುನರ್ಜನ್ಮವಿಲ್ಲ, ಸಂಸಾರದ ಬಾಧೆಯಿಲ್ಲ. ಸಮುದ್ರದಲ್ಲಿ ಒಂದು ತಂಬಿಗೆ ನೀರು ಸೇರಿ ಹೋದಂತೆ ಬ್ರಹ್ಮದಲ್ಲಿ ಜ್ಞಾನಿಯು ಸೇರಿಹೋಗುತ್ತಾನೆ. ಬ್ರಹ್ಮವು ಆನಂದಸ್ವರೂಪವಾದ್ದರಿಂದ, ಜ್ಞಾನಿಯೂ ಆನಂದ ಸ್ವರೂಪನೇ ಆಗಿಬಿಡುತ್ತಾನೆ. ಆದ್ದರಿಂದ ಮೋಕ್ಷಕ್ಕಾಗಿ ಯಾರೂ ಹೆದರಬೇಕಾಗಿಲ್ಲ. ಇದೆಲ್ಲವೂ ಅನೇಕ ಜನ್ಮಗಳಲ್ಲಿ ಮಾಡಿದ ನಿಷ್ಕಾಮಕರ್ಮಗಳಿಂದಲೂ, ಭಕ್ತಿಯೋಗದಿಂದಲೂ ಚಿತ್ತಶುದ್ಧಿಯನ್ನು ಪಡೆದ ಭಾಗ್ಯಶಾಲಿಗೆ ಮಾತ್ರ ದೊರಕತಕ್ಕದ್ದು.

ಹೀಗೆ ಮನುಷ್ಯಜನ್ಮವು ಸಾರ್ಥಕವಾಗಬೇಕಾದರೆ ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ಸಮಗ್ರವಾಗಿ ಯಾವ ತೊಡಕೂ ಇಲ್ಲದಂತೆ ಸುಂದರವಾದ ಈ ಮೂರು ಉಪನಿಷತ್ತುಗಳು ತಿಳಿಸಿಕೊಟ್ಟಿವೆ. ಭಗವದ್ಗೀತೆಯಂತೆ ಸರಳವಾದ ವಸ್ತು ನಿರೂಪಣೆ ಇರುವುದು ಇವುಗಳ ಇನ್ನೊಂದು ವೈಶಿಷ್ಟ್ಯ.

ಬಾಲಕನಾಗಿದ್ದಾಗ ವಿದ್ಯಾಭ್ಯಾಸದ ಕ್ರಮ ಮತ್ತು ಗೃಹಸ್ಥನಾದಾಗ ಪಾಲಿಸಬೇಕಾದ ಶಿಷ್ಟಾಚಾರಗಳನ್ನು ತಿಳಿಸಿಕೊಟ್ಟು, ಭಕ್ತಿಯೋಗವಿಶಿಷ್ಟವಾದ ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಗಳಿಸಿಕೊಂಡು, ಬ್ರಹ್ಮಸ್ವರೂಪವನ್ನರಿತು ಬ್ರಹ್ಮದಲ್ಲಿಯೇ ಲೀನನಾಗಿ ಪುನರ್ಜನ್ಮವನ್ನು ನೀಗಿಸಿಕೊಂಡು ಮುಕ್ತನಾಗುವ ರೀತಿಯನ್ನು ಈ ಮೂರು ಉಪನಿಷತ್ತುಗಳಿಂದ ಸ್ಪಷ್ಟವಾಗಿ, ಸುಲಭವಾಗಿ ತಿಳಿದುಕೊಳ್ಳಬಹುದು. ಮೋಕ್ಷವೆಂಬುದು ಕಗ್ಗತ್ತಲಿನ ರಾತ್ರಿಯಲ್ಲ. ಲೌಕಿಕವಾದ ವಿಷಯಭೋಗದ ಸುಖಕ್ಕಿಂತ ಸಾವಿರಾರು ಪಟ್ಟು ಹೆಚ್ಚು ಆನಂದವು ಮೋಕ್ಷದಲ್ಲಿದೆ. ಆ ಬ್ರಹ್ಮಾನಂದವು ಒಬ್ಬ ಸಾರ್ವಭೌಮನ ಸುಖಕ್ಕಿಂತಲೂ ಅತ್ಯಂತ ದೊಡ್ಡದಾದ ಆನಂದದ ರಾಶಿಯೇ ಆಗಿದೆಯೆಂದು ಮನದಟ್ಟಾಗುವಂತೆ ನಿರೂಪಿಸಿದ ಕೀರ್ತಿ ಈ ಉಪನಿಷತ್ತುಗಳಿಗೆ ಸಲ್ಲುತ್ತದೆ.

*(ಶೀಕ್ಷಾ, ಬ್ರಹ್ಮ, ಭೃಗು – ಈ ವಲ್ಲಿಗಳಿರುವ ಒಟ್ಟು ಭಾಗವು ತೈತ್ತಿರೀಯ ಉಪನಿಷತ್ತು ಎಂದು ಪ್ರಸಿದ್ಧವಾಗಿದೆ. ಮಾನ್ಯ ಲೇಖಕರು ಮೇಲಿನ ಲೇಖನದಲ್ಲಿ ಈ ಮೂರು ವಲ್ಲಿಗಳನ್ನು, ಉಪನಿಷತ್ತುಗಳು ಎಂದು ಹೆಸರಿಸಿದ್ದಾರೆ – ಸಂ.)*